**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 64/2021 |
| ಸಿ.ಡಬ್ಲ್ಯೂ | : 05 |
| ಪಿ.ಡಬ್ಲ್ಯೂ | : 04 |
| ಸಾಕ್ಷಿಯ ಹೆಸರು | : ನೇತ್ರಾವತಿ ಯಲ್ಲಪ್ಪ ಚಲವಾದಿ |
| ವಯಸ್ಸು | : 21 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಕುಬಿಹಾಳ ತಾಃ ಕುಂದಗೋಳ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 21.02.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರು ನನ್ನ ಸಂಬಂಧಿಕರು. ಚಾಸಾ-1 ನನ್ನ ಅಕ್ಕ. ಚಾಸಾ-4 ನನ್ನ ತಾಯಿ. ಚಾಸಾ-6 ರವರ ಪರಿಚಯವಿದೆ.

ಈಗ ಅಂದಾಜು 8 ವರ್ಷಗಳ ಹಿಂದೆ ಚಾಸಾ-1 ಹಾಗೂ ಆರೋಪಿತರ ನಡುವೆ ಆಸ್ತಿಯ ವಿಷಯವಾಗಿ ಜಗಳವಾಗಿರುತ್ತದೆ. ಆದರೆ ಸದರಿ ಆಸ್ತಿ ನಮಗೆ ಸಂಬಂಧವಿರುದಿಲ್ಲ. ಸದರಿ ಜಗಳದ ವೇಳೆ ನಾನು ಶಾಲೆಗೆ ಹೋಗಿದ್ದೆ. ನಂತರ 2 ನೇ ಆರೋಪಿ ಗರ್ಭಿಣಿಯಾಗಿದ್ದ ಚಾಸಾ-1 ರವರಿಗೆ ಕಂಟಿಮುಳ್ಳಿನಿಂದ ಹೊಡೆಬಡೆ ಮಾಡಿರುತ್ತಾನೆ. 1 ನೇ ಆರೋಪಿಯು ಸಹ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ಸದರಿ ಘಟನೆಯು ದಿಃ 25-07-2017 ರಂದು ಸಂ.04.30 ಗಂಟೆಗೆ

ಆಗಿರುತ್ತದೆ ಎಂದರೆ ಸರಿ. 1 ನೇ ಆರೋಪಿ ಚಾಸಾ-4 ರವರ ದುಬ್ಬಕ್ಕೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರ ಹೊಟ್ಟೆಗೆ ಒದ್ದು, ಕೆಳಗೆ ಬಿಳಿಸಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿ. ನಂತರ ಚಾಸಾ-6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದಃ</u>**

ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಚಾಸಾ-1 ಮತ್ತು 4 ರವರು ಹೇಳಿದ ಮೇರೆಗೆ ನನಗೆ ಘಟನೆಯ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನನ್ನ ತಂದೆಯ ಊರು ಮೆಣಸಗಿ ಗ್ರಾಮ. ಮದುವೆಯ ನಂತರ ನನ್ನ ತಾಯಿ ತನ್ನ ತವರು ಗುಡಿಸಾಗರ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ಆರೋಪಿ ನನ್ನ ತಾಯಿಯ ಅಣ್ಣನ ಹೆಂಡತಿ ಎಂದರೆ ಸರಿ. 2 ನೇ ಆರೋಪಿ 1 ನೇ ಆರೋಪಿ ಮಗ ಎಂದರೆ ಸರಿ. ನಾವೆಲ್ಲರೂ 1 ಆರೋಪಿಯ ಗಂಡನ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿ. ಆರೋಪಿತರು ಆಸ್ತಿಗಳಲ್ಲಿ ಪಾಲು ಕೊಡುವಂತೆ ಕೇಳಿದ್ದರಿಂದ ಘಟನೆ ಸಂಭವಿಸಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಹೊಡೆಬಡೆ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಮಾನಭಂಗ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರು ಜಗಳ ಬಿಡಿಸಿಲ್ಲ ಹಾಗೂ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರು ಸಲ್ಲಿಸಿದ್ದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**